**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**

**ಚಿಂತಾಮಣಿ**

**ಸಿಸಿ ಸಂಖ್ಯೆ :99/2023**

ಚಾಸಾ: 2

ಪ್ರಾಸಾ: 2

ದಿನಾಂಕ 18.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | | |
|---|---|---|
| ಸಾಕ್ಷಿದಾರರ ಹೆಸರು | : | ಶಿವಮ್ಮ |
| ಗಂಡನ ಹೆಸರು | : | ರಮೇಶ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | : | ಕಟ್ಟಿಗೆಹಳ್ಳಿ |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 1 ಅತ್ತೆ. ಚಾಸಾ 3 ಮೈದ. ಆರೋಪಿತರು ನನಗೆ ಗೊತ್ತು. ದಿಃ 29.05.2023 ರಂದು ನನ್ನ ಅತ್ತೆ ಚಾಸಾ 1 ರವರು ನನಗೆ ಬಾ ಎಂದು ಹೇಳಿ ಬೈಯುತ್ತಿದ್ದರು, ನಾನು ಹೋಗದೆ ಇರುವ ಕಾರಣ ಆರೋಪಿತರೆಲ್ಲಾ ಬಂದು ಕಲ್ಲಿನಲ್ಲಿ ಚಾಸಾ 1 ರವರಿಗೆ ಹೊಡೆದಿರುತ್ತಾರೆ ನಂತರ ನಾನು ಬಂದಿರುತ್ತೇನೆ. ನಂತರ ಪೊಲೀಸರು ಬಂದಿರುತ್ತಾರೆ. ನನ್ನನ್ನು ವಿಚಾರಿಸಿರುತ್ತಾರೆ ಅವರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಮಾರನೇ ದಿನ ಪೊಲೀಸರು ಸಂಜೆ 4 ಗಂಟೆಯಿಂದ 5 ಗಂಟೆಯವರೆಗೆ ನಮ್ಮ ಮನೆ ಬಳಿ ಬಂದಿರುತ್ತಾರೆ. ದಾಖಲಾತಿಗೆ ಸಹಿ ತೆಗೆದುಕೊಂಡಿರುತ್ತಾರೆ. ಚಾಸಾ 4 ಮತ್ತು 5 ರವರು ಸಹ ಹಾಜರಿದ್ದರು. ಪೊಲೀಸರು ಕಲ್ಲನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಸದರಿ ಪಂಚನಾಮೆಗೆ ಚಾಸಾ 4 ಮತ್ತು 5 ಸಹಿ ಮಾಡಿದ್ದಾರೆ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 28.05.2023 ರಂದು ಸಂಜೆ 6.30 ರ ಸಮಯದಲ್ಲಿ ನಾನು ಮತ್ತು ಚಾಸಾ 3 ರವರು ಮನೆಯಲ್ಲಿದ್ದಾಗ ಚಾಸಾ 1 ರವರು ಕುರಿಗಳನ್ನು ವಮೇಯಿಸಿಕೊಂಡು ಮನೆಗೆ ಬಂದು ಕುರಿಗಳನ್ನು ದೊಡ್ಡಿಗೆ ಹಾಕಲು ನನ್ನನ್ನು ಕರೆದಿದ್ದು, ನಾನು ಬರಲು ತಡ ಮಾಡಿದ್ದಕ್ಕೆ ನನ್ನನ್ನು ಬೈಯುತ್ತಿದ್ದರು ಎಂದರೆ ಸರಿ. ಸ್ವಲ್ಪ ಸಮಯದ ನಂತರ ಗಲಾಟೆ ಶಬ್ದ ಕೇಳಿ ನಾನು ಮತ್ತು ಚಾಸಾ 3 ರವರು ಅಲ್ಲಿಗೆ ಬಂದು ನೋಡಿದಾಗ ಆರೋಪಿತರು ಚಾಸಾ 1 ರವರ ಜೊತೆ ಗಲಾಟೆ ಮಾಡಿಕೊಳ್ಳುತ್ತಿದ್ದು, ಚಾಸಾ 1 ರವರ ತಲೆಗೆ ರಕ್ತಗಾಯವಾಗಿದ್ದು ನಾವಿಬ್ಬರು ಗಲಾಟೆಯನ್ನು ಬಿಡಿಸಿ ನನ್ನ ಅತ್ತೆಯನ್ನು ದ್ವಿಚಕ್ರ ವಾಹನದಲ್ಲಿ ಚಿಂತಾಮಣಿ ಸರ್ಕಾರಿ ಆಸ್ಪತೆಗೆ ದಾಖಲಿಸಿರುತ್ತೇವೆ ಎಂದರೆ ಸರಿ. ತದನಂತರ ನನ್ನ ಅತೆಯನ್ನು ವಿಚಾರಿಸಿದಾಗ ನನ್ನ ಅತ್ತೆ ರತ್ನಮ್ಮ ಅವರು ನನ್ನನ್ನು ಬೈದುಕೊಳ್ಳುತಿದ್ದನ್ನು ಆರೋಪಿತರು ತಪ್ಪು ತಿಳಿದುಕೊಂಡು ನನ್ನ ಅತೆಯನ್ನು ಅವಾಚ್ಯ ಶಬ್ದಗಳಿಂದ ಬೈದು ಕೈಗಳಿಂದ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿ ಕಾರ್ತಿಕ್ ಕಲ್ಲಿನಿಂದ ಆಕೆಯ ತಲೆಗೆ ಹೊಡೆದು ರಕ್ತ ಗಾಯ ಮಾಡಿದ್ದಾನೆ ಎಂದರೆ ಸರಿ. ಆರೋಪಿ ರಾಮಪ್ಪ, ಶ್ರೀನಿವಾಸ ಮತ್ತು ನರಸಿಂಹ ಆಕೆಯನ್ನು ಹಿಡಿದು ಕೈಗಳಿಂದ ಹೊಡೆದು ಕಾಲಿನಿಂದ ಒದ್ದು ತಳ್ಳಿ ಹೊರಳಾಡಿಸಿ ನಮ್ಮ ಮನೆ ಬಳಿ ಇನ್ನೊಂದು ಸಾರಿ ಶಾಪ ಹಾಕಿದರೇ ನಿನ್ನ ಕಥೆ ಮುಗಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

ಪೊಲೀಸರ ಮರುದಿನ ಸ್ಥಳಕ್ಕೆ ಬಂದು ಸಂಜೆ 4 ರಿಂದ 5 ಗಂಟೆಯವರೆಗೆ ಪಂಚನಾಮೆ ಮಾಡಿ ಎಂ.ಓ 1 ನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ದಿಃ29.05.2023 ರಂದು ಪಂಚನಾಮೆಗೆ ಬಂದಿದ್ದಾರೆ ಎಂದರೆ ಸರಿ. ಪೊಲೀಸರಿಗೆ ನಾನೇ ಸ್ಥಳ ತೋರಿಸಿ ಕೊಟ್ಟಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಆರ್ ವಿ ವಕೀಲರಿಂದಃ**

ಚಾಸಾ 4 ನನ್ನ ತಂದೆ. ಚಾಸಾ 5 ರವರು ಚಾಸಾ 3 ರವರ ಮಾವ. ನಮಗೂ ಆರೋಪಿತರಿಗೂ ಜಮೀನಿನ ವಿವಾದ ಇದೆ ಎಂದರೆ ಸಾಕ್ಷಿಯು ಅದು ಕೇಸು ಬೇರೆ ಈ ಕೇಸ ಬೇರೆ ಎಂದು ನುಡಿಯುತ್ತಾರೆ. ಪೊಲೀಸರು ಮಹಜರಲ್ಲಿ ಮತ್ತು ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಗೊತ್ತಿಲ್ಲ, ನಾನು ಏನು ಹೇಳಿದ್ದೇನು ಅದನ್ನೇ ಬರೆದುಕೊಂಡಿದ್ದಾರೆ. ಪೊಲೀಸರು ಓದಿ ಏನು ಹೇಳಲಿಲ್ಲ. ನಾನು ಹೇಳಿದನ್ನೇ ಬರೆದುಕೊಂಡಿದ್ದಾರೆ. ಗಲಾಟೆ ಆದ ನಂತರ ನಾನು ಬಂದೆ. ಆ ಸಮಯದಲ್ಲಿ ನನ್ನ ಅತ್ತೆಗೆ ಕಲ್ಲು ಇತ್ತು, ಆಕೆಗೆ ಗಾಯವಾಗಿತ್ತು. ಎಂ. ಓ 1 ನ್ನು ನಿಖರವಾಗಿ ಗುರುತಿಸಲು, ಏನಾದರು ಗುರುತು ಇಟ್ಟುಕೊಂಡಿದ್ದೀರಾ ಎಂದರೆ ಅದೇ ಕಲ್ಲು ಎಂದು ನುಡಿಯುತ್ತಾರೆ. . ಅದರ ಮೇಲೆ ದಿನಾಂಕ ಬರೆದಿಲ್ಲ. ಅದರ ಮೇಲೆ ರಕ್ತ ಕಲೆ ಇಲ್ಲ ಎಂದರೆ ಈಗಾಗಲೇ 2 ವರ್ಷವಾಯಿತು ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಸಿವಿಲ್ ಕೇಸ ರಾಜಿ ಮಾಡಿಕೊಳ್ಳಲಿ ಎಂದು ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**
**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.**